ಬಂದಾಗ, ಏಕೆ ಸ್ವಾತಂತ್ರ್ಯದ ಹೋರಾಟಗಾರರು ಅಷ್ಟು ದೊಡ್ಡವರಾಗುತ್ತಾರೆ, ಸ್ವಾತಂತ್ರ್ಯ ನಮಗೆ ಏಕೆ ಬಂತು ಎನ್ನುವುದು ಕಲ್ಪನೆ ಬರುತ್ತದೆ. ಏಕೆಂದರೆ, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಬರೆಯುವುದಷ್ಟೇ ಅಲ್ಲ, ಸ್ವಾತಂತ್ರ್ಯ ಬಂದಿದ್ದು ಏಕೆ, ಏಕೆ ನಾವು ತಂದೆವು, ಹಿಂದೆ ರಾಜರ ಆಳ್ವಿಕೆ ಹೇಗಿತ್ತು, ಅದನ್ನೂ ಕೂಡ ತಿಳಿಸಿದಾಗ, ಮಕ್ಕಳಿಗೆ ಸಾಕಷ್ಟು ವಿಷಯ ಗೊತ್ತಾಗುತ್ತವೆ. ಆದ್ದರಿಂದ ಈ ಮೂಢ ನಂಬಿಕೆ ವಿಷಯಗಳನ್ನು ತೊಲಗಿಸುವಂತಾದ್ದು, ಮತ್ತು ಪ್ರಜಾಸತ್ತೆ ಮತ್ತು ರಾಜಸತ್ತೆ ಇವುಗಳ ಬಗ್ಗೆಯೂ ಕೂಡ ಪಠ್ಯದಲ್ಲಿ ಅಳವಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಉಪಾಧ್ಯಕ್ಷರೇ, ಮಾರುತಿರಾವ್ ಪವಾರ್ ಕೇಳಿರತಕ್ಕ ಪ್ರಶ್ನೆಗೆ ನಾನು ಉತ್ತರ ಹೇಳುವುದಕ್ಕಾಗಲಿಲ್ಲ. ಇದಕ್ಕೆ ಒಂದು ಕಮಿಟಿಯನ್ನೇ ಮಾಡಿದ್ದೇವೆ. ಆ ಕಮಿಟಿಯವರೇ ಇದನ್ನೆಲ್ಲಾ ರಿವ್ಯೂ ಮಾಡಿ, ಮಾಡುತ್ತಿದ್ದಾರೆ. ತಾವೇನು ಅಭಿಪ್ರಾಯಪಟ್ಟಿದ್ದೀರಿ ಮತ್ತು ಶ್ರೀಮತಿ ಲಲಿತಾನಾಯಕ್‌ರವರು ಏನು ವಿಷಯಗಳನ್ನು ಹೇಳಿದ್ದಾರೆ, ಇದನ್ನೆಲ್ಲಾ ಪಠ್ಯಪುಸ್ತಕಗಳ ಕಮಿಟಿಯಲ್ಲಿ, ಯಾವುದು ಅವಶ್ಯಕತೆ ಇದೆ, ಮಕ್ಕಳ ಜ್ಞಾನ ಭಂಡಾರ ಹೆಚ್ಚಿಸುವುದಕ್ಕೆ ಮತ್ತು ಅವರು ಯಾವರೀತಿಯಲ್ಲಿ ಜೀವನ ಮಾಡಬೇಕೆಂಬ ಬಗ್ಗೆ ಅರಿವನ್ನು ಮೂಡಿಸತಕ್ಕ ರೀತಿಯಲ್ಲಿ ಅವರಿಗೆ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ರಾಜ್ಯದಲ್ಲಿ ಪಂಚಾಯಿತಿಗೊಂದು ಜನತಾ ನ್ಯಾಯಾಲಯಗಳ ಸ್ಥಾಪನೆ.

581: (4116)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಪಂಚಾಯಿತಿಗೊಂದು ಜನತಾ ನ್ಯಾಯಾಲಯ ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ?

ಆ. ಹಾಗಿದ್ದಲ್ಲಿ ಎಷ್ಟು ಪಂಚಾಯತಿಗಳಲ್ಲಿ ಈ ಜನತಾ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ?

ಇ. ಈ ವ್ಯವಸ್ಥೆಯನ್ನು ಯಾವ ಯಾವ ನಿಯಮಗಳ ಅನ್ವಯ ಮಾಡಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ. ಇಲ್ಲ. ಆದರೆ ನ್ಯಾಯ ಪಂಚಾಯತಿಗಳನ್ನು ಸ್ಥಾಪಿಸುವ ಪ್ರಸ್ತಾವನೆಯು

ಪರಿಶೀಲನೆಯಲ್ಲಿದೆ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಪಂಚಾಯತಿ ಜನತಾ ನ್ಯಾಯಾಲಯದ ಸ್ಥಾಪನೆ ಮಾಡುವ ಉದ್ದೇಶವಾದರೂ ಎನು? ನ್ಯಾಯ ಪಂಚಾಯತಿಗಳನ್ನು ಸ್ಥಾಪನೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಆದರೆ ಇದುವರೆಗೂ ತಾವು ಯಾವುದೇ ಕಾರ್ಯಕ್ರಮವನ್ನು ರೂಪಿಸಿಲ್ಲ. ನಾನು ಹೇಳುವುದೇನೆಂದರೆ ಜನವರಿಯಲ್ಲಿ ಪಂಚಾಯತಿ ಚುನಾವಣೆಗಳನ್ನು ಮಾಡಬೇಕೆಂದು ಸರ್ಕಾರ ನಿರ್ಧರಿಸಿದೆ. ಮತ್ತು ನೋಟಿಫಿಕೇಷನ್ ಹೊರಡಿಸುವಂತಹ ವಿಚಾರವನ್ನು ಸರ್ಕಾರ ಹೊಂದಿದೆ. ನಾಲ್ಕು ವರ್ಷಗಳಿಂದ ತಾವು ಏಕೆ ಈ ಬಗ್ಗೆ ಕ್ರಮ ಕೈಗೊಳ್ಳಲಿಲ್ಲ? ನಾವು ಈ ಬಗ್ಗೆ ಸದನದಲ್ಲಿಯೂ ಮಾತನಾಡಿದ್ದೇವೆ. ತಾವು ಹೇಳಿದ್ದೀರಿ. ಮತ್ತು ತಮ್ಮ ಪ್ರಣಾಳಿಕೆಯಲ್ಲಿಯೂ ಹೇಳಿದ್ದೀರಿ, ಏಕೆ ಗ್ರಾಮ ಪಂಚಾಯತಿಗೆ ಒಂದು ನ್ಯಾಯ ಪಂಚಾಯತಿಯನ್ನು ಮಾಡುವುದಕ್ಕೆ ಆಗಲಿಲ್ಲ? ಇದಕ್ಕೆ ಕಾರಣ ಎನು? ಇದಕ್ಕೆ ಇರುವ ಅಡೆತಡೆ ಏನು? 5400 ಪಂಚಾಯತಿಗಳಿಗೆ ನ್ಯಾಯ ಪಂಚಾಯತಿಗಳು ಇದ್ದಿದ್ದರೆ ಬಹಳ ಅನುಕೂಲವಾಗುತ್ತಿತ್ತು ತಾವು ಏಕೆ ಮಾಡಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಣ್ಣಯ್ಯನವರಿಗೆ ಇರುವಂತಹ ಬದ್ಧತೆ ನಮ್ಮಲ್ಲಿ ಅನೇಕ ಕಡೆಗೆ ಇಲ್ಲ. ನ್ಯಾಯ ಪಂಚಾಯತಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತರಬೇಕೆನ್ನುವ ವಿಚಾರಗಳಲ್ಲಿ ಅದು ಪ್ರಾಯಶಃ ನಮ್ಮ ರಾಜಕೀಯ ವಿರೋಧಿಗಳ ಅಥವಾ ದುರ್ಬಲ ವರ್ಗದವರ ಮೇಲೆ ದಬ್ಬಾಳಿಕೆಯಾಗುವಂತಹ ಸಂಬಂಧ ಇದೆ ಎಂದು ಹೇಳಿ ಹಿಂದೆ ಈ ವಿಚಾರದಲ್ಲಿ ಪ್ರಸ್ತಾವವನ್ನು ದಿವಂಗತ ನಜೀರ್‌ಸಾಬ್ ರವರು ಇದ್ದಂತಹ ಸಂದರ್ಭದಲ್ಲಿ 1987ನೇ ಇಸವಿಯಲ್ಲಿ ಬಂದಂತಹ ಮಂಡಲ್ ಪಂಚಾಯತಿ ಜಿಲ್ಲಾ ಪರಿಷತ್ತು ಮತ್ತು ನ್ಯಾಯ ಪಂಚಾಯತಿ ಕಾನೂನಿನಲ್ಲಿ ನ್ಯಾಯ ಪಂಚಾಯತಿಯನ್ನು ಐದು ವರ್ಷಗಳ ಕಾಲ ಮುಂದೂಡಬೇಕು ಎನ್ನುವಂತಹ ಮಾತಾಗಿತ್ತು. ತದನಂತರ ಅಧಿಕಾರಕ್ಕೆ ಬಂದ ಸರ್ಕಾರ ಅದನ್ನು ಜಾರಿಗೊಳಿಸುವಂತಾದ್ದಕ್ಕೆ ಸಂಪೂರ್ಣವಾಗಿ ಕೈ ಬಿಟ್ಟು, ಕರ್ನಾಟಕ ಪಂಚಾಯತ್ ಕಾನೂನು 1993 ಎಂದು ಮಾಡಿ, ನ್ಯಾಯ ಪಂಚಾಯತಿಯ ಪರಿಕಲ್ಪನೆಯನ್ನೇ ಅವರು ಸಂಪೂರ್ಣವಾಗಿ ಕೈ ಬಿಟ್ಟಿದ್ದರು. ನಾವು ಬಂದ ಮೇಲೆ ಪುನಃ ನಾಯಕ್ ಅವರ ಪರಿಣತರ ವರದಿ ಬಂದ ಮೇಲೆ ಈ ವಿಚಾರದಲ್ಲಿ ನ್ಯಾಯ ಪಂಚಾಯತಿಯನ್ನು ನಾವು ಮಾಡಿದಾಗ ಸಣ್ಣ ಪುಟ್ಟ ಕಳ್ಳತನಗಳು ಆದಾಗ ಪರಿಸರದ ಹಾನಿ ಮತ್ತು ಸಣ್ಣ ಪುಟ್ಟ ಗಾಯ, ಹಲ್ಲೆ ಇವುಗಳಿಗೆ ಸಂಬಂಧಿಸಿರುವಂತಾದ್ದು ಆಗಬಹುದು, ಅಥವಾ ಕಂಟ್ರಾಕ್ಟ್‌ರ್‌ಗಳಿಂದ ಬರುವಂತಹ ಹಣ, ಅಥವಾ ಚರಾಸ್ತಿಗಳಿಂದ ಬರಬೇಕಾದ

ವಸೂಲಿ, ಜಾನುವಾರುಗಳು ಅಕ್ರಮ ಪ್ರವೇಶದಿಂದ ಆದ ಹಾನಿ, ಒಟ್ಟು ಎರಡು ಸಾವಿರಕ್ಕಿಂತ ಹೆಚ್ಚು ಮೊಬಲಗು ಇಲ್ಲದೇ ಇರುವಂತಹ ವಿಷಯಗಳನ್ನು ಈ ನ್ಯಾಯ ಪಂಚಾಯತಿಗಳಲ್ಲಿ ಅಳವಡಿಸಬೇಕೆನ್ನುವ ವಿಧೇಯಕವನ್ನು ನಾವು ಈಗಾಗಲೇ ತಯಾರು ಮಾಡಿದ್ದೇವೆ; ನಮ್ಮ ಕಾನೂನು ಮತ್ತು ಸಂಸದೀಯ ಮಂತ್ರಿಗಳು, ಇದರ ಬಗ್ಗೆ ಒಂದು ಸ್ಕ್ರೀನಿಂಗ್ ಕಮಿಟಿಗೆ ಕೂಡ ಒಪ್ಪಿಗೆಯನ್ನು ಕೊಟ್ಟಿದ್ದಾರೆ, ಈಗಾಗಲೇ ನಾವು ವಿಧೇಯಕವನ್ನು ತಯಾರು ಮಾಡಿದ್ದೇವೆ. ಈ ಅಧಿವೇಶನದಲ್ಲಿಯೇ ಅದನ್ನು ನಾವು ಮಂಡಿಸಬೇಕೆಂದು ಯೋಚನೆ ಮಾಡಿದ್ದೆ, ಆದರೆ ಸಂಪೂರ್ಣವಾಗಿ ಈ ಅಧಿವೇಶನ ಅವಿಶ್ವಾಸ ಗೊತ್ತುವಳಿಗೆ ಮೀಸಲಾಗಿದ್ದರಿಂದ ನಾವು ಈ ವಿಧೇಯಕವನ್ನು ತರಲಿಕ್ಕೆ ಆಗಲಿಲ್ಲ. ಆದರೆ ಮಾರ್ಚಿಯಲ್ಲಿ ಬರತಕ್ಕಂಥ ಅಧಿವೇಶನದಲ್ಲಿ ಈ ಕಾನೂನುನನ್ನು ಈಗ ಇರತಕ್ಕಂಥ ಪಂಚಾಯತ್ ಆಕ್ಟ್ ಕಾನೂನಿಗೆ ತರುತ್ತೇನೆಂದು ನಾನು ತಮ್ಮ ಮೂಲಕ ಭರವಸೆಯನ್ನು ಕೊಡುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ತಾವು ಒಂದು ನ್ಯಾಯ ಪಂಚಾಯತಿಯನ್ನು ರೂಪಿಸಬೇಕಾದರೆ ಎಲ್ಲಾ ವಿರೋಧಪಕ್ಷದವರನ್ನು ಕರೆದು ಅವರ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಯಾವ ರೀತಿ ಮಾಡಬಹುದು, ಯಾವ ರೀತಿ ಮಾಡಿದರೆ ಸಮಸ್ಯೆಗಳನ್ನು ಬಗೆಹರಿಸಬಹುದು, ಇದರ ಬಗ್ಗೆ ಅತ್ಯಂತ ಗಂಭೀರವಾದ ಚಿಂತನೆ ಮಾಡಬೇಕು. ಹಿಂದೆ ಹಳ್ಳಿಯಲ್ಲಿ ಎಲ್ಲಾ ಕಡೆ ನ್ಯಾಯ ಪಂಚಾಯಿತಿಗಳು ಇದ್ದವು. ನಾವು ನಾವೇ ಮಾಡಿಕೊಂಡಿದ್ದೆವು. ಈ ಒಂದು ರಾಜಕೀಯ ಅಸೂಯೆ ಮತ್ತು ದ್ವೇಷಗಳಿಂದ ಅದು ನಾಶವಾಗಿದೆ. ಇದರಿಂದ ನೆಮ್ಮದಿ ಸಿಗುವುದಕ್ಕೆ ಸಾಧ್ಯವಿದೆ. ಇದರಿಂದ ಕೆಲವು ಪ್ರಕರಣಗಳು ನ್ಯಾಯಾಲಯಕ್ಕೆ ಹೋಗದಂತೆ ಮಾಡಬಹುದು, ಇದರ ಬಗ್ಗೆ ತಾವು ಗಂಭೀರವಾಗಿ ಯೋಚನೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಹಿಂದೆ ಇದ್ದಂತಹ ನಮ್ಮ ನ್ಯಾಯ ಪಂಚಾಯತಿಗಳು ಹಳ್ಳಿಗಳಲ್ಲಿ ಕುಲಪದ್ಧತಿಯ ನ್ಯಾಯ ಪಂಚಾಯತಿಗಳು ಆಗಿದ್ದವು. ಆದರೆ ಸಂಪೂರ್ಣವಾಗಿ ನ್ಯಾಯ ಪಂಚಾಯತಿಯಾಗುವಂತಹ ಪರಿಕಲ್ಪನೆ ಅದು ಬಹಳ ಮಟ್ಟಿಗೆ ದುರ್ಬಲವರ್ಗದವರಿಗೆ, ಅನುಕೂಲವಾಗುವುದಿಲ್ಲ ಎನ್ನುವಂತಹ ವಾತಾವರಣ ಕೂಡ ಇತ್ತು. ಆದರೆ ನಾವು ಈಗ ಯೋಚನೆ ಮಾಡಿರತಕ್ಕಂಥ ನ್ಯಾಯ ಪಂಚಾಯತಿ ಆಯ್ಕೆಯಾಗಿರುವಂತಹ ಐದು ಮಂದಿ ಸದಸ್ಯರ ಮೂಲಕ ಆಗುತ್ತದೆ. ಅದರಲ್ಲಿ ಪರಿಶಿಷ್ಟ ಜಾತಿಯವರು ಕಡ್ಡಾಯವಾಗಿ ಇರಬೇಕಾಗುತ್ತದೆ. ಅಥವಾ ಪರಿಶಿಷ್ಟ ಪಂಗಡದವರು ಒಬ್ಬರು ಅದರಲ್ಲಿ ಕಡ್ಡಾಯವಾಗಿರಬೇಕಾಗುತ್ತದೆ. ಒಬ್ಬರು ಮಹಿಳೆ, ಒಬ್ಬರು ಹಿಂದುಳಿದವರು ಕಡ್ಡಾಯವಾಗಿ ಇರಬೇಕಾಗುತ್ತದೆ. ಇನ್ನು ಎರಡು ಕ್ಷೇತ್ರಗಳು ಮಾತ್ರ ಸಾಮಾನ್ಯ. ಆದರೆ ಬರುವಂತಹ ತೀರ್ಮಾನಗಳು ಏನು ಇವೆ ಈ ತೀರ್ಮಾನಗಳು ಒಮ್ಮತದ ತೀರ್ಮಾನಗಳು ಆಗಿರಬೇಕು. ಅವು ಬಹುಮತದ ತೀರ್ಮಾನಗಳು ಆದರೆ ಬರುವಂತಹ ತೀರ್ಮಾನಗಳು ಎನು ಇವೆ ಈ ತೀರ್ಮಾನಗಳು

ಒಮ್ಮತದ ತೀರ್ಮಾನಗಳು ಆಗಿರಬೇಕು. ಅವು ಬಹುಮತದ ತೀರ್ಮಾನಗಳು ಆದರೆ ಮತ್ತೆ ಹಳ್ಳಿಯಲ್ಲಿ ಗೊಂದಲಗಳು ಸೃಷ್ಟಿಯಾಗುವಂತಹ ಸಂಬಂಧಗಳು ಇವೆ. 50 ರೂಪಾಯಿಗಳಿಗಿಂತ ಹೆಚ್ಚು ದಂಡ ವಿಧಿಸತಕ್ಕಂಥ ಅಧಿಕಾರವನ್ನು ಕೂಡ ಕೊಡಬಾರದು ಎನ್ನತಕ್ಕಂಥ ಚರ್ಚೆ ಇದೆ. ಅವರು ಯಾವುದೇ ಶಿಕ್ಷೆಯನ್ನು ಕೊಡಬಾರದು ಎನ್ನುವ ಮಾತು ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ತಾವು ಸಲಹೆ ಮಾಡಿದಂತೆ, ಮಾರ್ಚ್ ತಿಂಗಳಲ್ಲಿ ನಡೆಯುವ ಅಧಿವೇಶನದ ಪೂರ್ವದಲ್ಲಿಯೇ ಎಲ್ಲಾ ವಿರೋಧಪಕ್ಷದ ನಾಯಕರನ್ನು ಮತ್ತು ಕೆಲವು ಪರಿಣಿತರನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರೆದು ಅವರ ಸಲಹೆ ಸೂಚನೆಗಳನ್ನು ತೆಗೆದುಕೊಂಡು, ಈಗ ಇರುವಂತಹ ನಮ್ಮ ನ್ಯಾಯ ಪಂಚಾಯತಿಯ ಪರಿಕಲ್ಪನೆಯಲ್ಲಿಯೇ ಅವುಗಳನ್ನು ಅಳವಡಿಸುವಂತಹ ಕ್ರಮ ಕೈಗೊಳ್ಳುತ್ತೇನೆ.

Amount released to Government High School at Govanakoppa in Badami Taluk.

852: (4156)

Sri.B.B.Chimmanakatti (Badami): Will the Minister for Primary & Secondary Education be pleased to state

a) When the Government High School at Govanakoppa, Badami Taluk was started?

b) Whether it has come to the notice of the Government about the problem being faced in view of non-availability of building?

c) If so, how much amount will be released during this year to take up the work?

SRI.H.G.Govinda Gowda (Minister for primary & Secondary Education):

a) Government High School at Govanakoppa was started on 8.7.1996.

b) Yes.